ವಾರದ ಪತ್ರ



## ನಾಯಿಗಳಿಗೂ ಇದೆ ಸಾಮಾನ್ಯಜ್ಞಾನ

ಕಲರ್ಸ್ ಕನ್ನಡದ 'ರಾಮಾಚಾರಿ' ಧಾರಾವಾಹಿಯಲ್ಲಿ ನಕಲಿ ಗುರುಗಳ ಮಾತಿನಂತೆ ವೈಶಾಖಳನ್ನು ಕುತ್ತಿಗೆ ತನಕ ಮಣ್ಣಿನಲ್ಲಿ ಹುಗಿದು ಬಿಡುತ್ತಾರೆ. 'ವಿಶ್ವಾಸ ದ್ರೋಹ ಘೋರ ಪಾಪಂ' ಎಂಬ ಮಂತ್ರ ಪಠಿಸುವಾಗ ನಾಯಿ ಬಂದು ವೈಶಾಖಳ ಮುಖಕ್ಕೆ ಮೂತ್ರ ವಿಸರ್ಜನೆ ಮಾಡುವ ಸನ್ನಿವೇಶ ಬರುತ್ತದೆ. ದಯವಿಟ್ಟು ಇಂತಹ ಅತಿರೇಕಗಳನ್ನು ನಿರ್ದೇಶಕರು ನಿಲ್ಲಿಸಲಿ. ನಾಯಿಗಳು ಸೂಕ್ಷ್ಮವಾಗಿ ಆಘ್ರಾಣಿಸುವ ಗುಣ ಹೊಂದಿದ್ದು, ಅವು ಖಂಡಿತ ಮನುಷ್ಯನ ಮೇಲೆ ಮೂತ್ರ ಮಾಡಲಾರವು. ಯಾವುದೋ ಸಿನಿಮಾದ ಅಸಂಬದ್ಧ ದೃಶ್ಯವನ್ನು ತಂದು ಇಲ್ಲಿ ತುರುಕಿದ್ದಾರೆ. ಸದ್ಯ ಚಿತ್ರೀಕರಣದ ವೇಳೆ ನಿರ್ದೇಶಕರ ಮೇಲೋ, ಕ್ಯಾಮೆರಾ ಮೇಲೋ ನಾಯಿ ಮೂತ್ರ ವಿಸರ್ಜನೆ ಮಾಡಿಲ್ಲ ಅನ್ನುವುದೇ ಸಮಾಧಾನ.

—ನಗರ ಗುರುದೇವ್ ಭಂಡಾರ್ಕರ್, ಹೊಸನಗರ

'ರಾಮಾಚಾರಿ'ಯ ಇತ್ತೀಚಿನ ಸಂಚಿಕೆಯೊಂದರಲ್ಲಿ ಮಣ್ಣಲ್ಲಿ ಗುಂಡಿಯಲ್ಲಿ ಹುದುಗಿ ಕೂತ ವೈಶಾಖ ಕೊನೆಗೂ ಗುಂಡಿಯಿಂದ ಮೇಲೆದ್ದು ಬಂದಳು. ಮೇಲೆ ಬಂದಾಗ ಆಕೆ ಉಟ್ಟಿದ್ದ ಸೀರೆಗೆ ಎಲ್ಲೂ ಮಣ್ಣು ಮೆತ್ತಿಕೊಳ್ಳದೇ ಇದ್ದದ್ದು ಆಶ್ಚರ್ಯವನ್ನು ಉಂಟು ಮಾಡಿತು. ಓ ನಿರ್ದೇಶಕರೇ, ಈ ರೀತಿಯ ಡಸ್ಟ್ ಪ್ರೂಫ್ ಸೀರೆ ಎಲ್ಲಿ ಸಿಗುತ್ತೆ? ಹೇಳಿ ಮಾರಾಯ್ರೆ! ವಾಟರ್ ಪ್ರೂಫ್ ಕೇಳಿದ್ದೆ ಈಗ ಡಸ್ಟ್ ಪ್ರೂಫ್ ಸೀರೆಯೂ ಬಂದಿದೆಯಾ ಎಂದೆನಿಸಿತು. ಈ ರೀತಿಯ ಸೀರೆ ಬಳಸಿದಲ್ಲಿ ಬೇಸಿಗೆ ದಿನಗಳಲ್ಲಿ ನೀರನ್ನೂ ಉಳಿಸಬಹುದು.

—ಪೂರ್ಣಿಮಾ ಹೆಚ್.ಎಸ್., ಹೊಸನಗರ

## ಪಾಠ ಕಲಿಸುವ 'ಶಾಂತಂ ಪಾಪಂ'




ಸಂಜೆ ಆಗುತ್ತಿದ್ದಂತೆ ಮನೆಮಂದಿ ಒಂದಿಲ್ಲೊಂದು ಕನ್ನಡ ಧಾರಾವಾಹಿಗಳನ್ನು ನೋಡುತ್ತಾರೆ. ಕನ್ನಡದ ಮೇಲಿರುವ ಅಭಿಮಾನ ಧಾರಾವಾಹಿಗಳನ್ನು ನೋಡುವುದರ ಮೂಲಕ ವ್ಯಕ್ತವಾಗುತ್ತದೆಂದು ಭಾವಿಸಬಹುದು. ಆದರೆ ಆ ಅಭಿಮಾನ ವಾಹಿನಿಯವರಿಗೆ ಇದ್ದಂತೆ ಕಾಣುವುದಿಲ್ಲ. ವರ್ಷಗಳು ಉರುಳಿದರೂ ಧಾರಾವಾಹಿಗಳನ್ನು ಮುಗಿಸುವುದಿಲ್ಲ. ಕಲರ್ಸ್ ಕನ್ನಡದ 'ಶ್ರೀಗೌರಿ' ದಿಢೀರನೆ ಅಂತ್ಯ ಕಾಣಿಸಿದರು. ಅದರ ಸ್ಥಾನದಲ್ಲಿ 'ನೂರು ಜನ್ಮಕೂ' ತಂದರೂ ಪ್ರೇಕ್ಷಕರಿಗೆ ಅದು ಅಷ್ಟು ಹಿಡಿಸಲಿಲ್ಲ ಎನ್ನುವ ಕಾರಣಕ್ಕೋ ಏನೋ ಅದನ್ನು ವಾರಾಂತ್ಯಕ್ಕೆ ದೂಡಿದ್ದಾರೆ.

ಈ ದಿನಗಳಲ್ಲಿ ಯುವಜನಾಂಗ ಲೈಂಗಿಕ ಅಪರಾಧದಲ್ಲಿ ಭಾಗಿಯಾಗುವುದು, ಹನಿಟ್ರ್ಯಾಪ್‌ಗೆ ತುತ್ತಾಗುವುದು, ಹಣಕಾಸಿನ ವಂಚನೆ, ಆತ್ಮಹತ್ಯೆ, ಹತ್ಯೆ, ವಂಚನೆ – ಹೀಗೆ ನಾನಾ ಪ್ರಕರಣಗಳಲ್ಲಿ ಸಿಲುಕಿಕೊಳ್ಳುತ್ತಾರೆ. ಅವರು ಕಾನೂನಿನ ಸಹಾಯಕ್ಕೆ ಪೊಲೀಸರ ಮೊರೆಹೋಗುವುದು ಸಾಮಾನ್ಯವಾಗಿದೆ. ಇಂಥ ಪ್ರಕರಣಗಳನ್ನು 'ಪಾಪದ ಕಥೆಗಳು... ಪಾಠ ಕಲಿಸುವ ಕಥೆ' ಹೆಸರಿನಲ್ಲಿ ಕಲರ್ಸ್ ಕನ್ನಡದಲ್ಲಿ 'ಶಾಂತಂ ಪಾಪಂ' ಕಾರ್ಯಕ್ರಮದಲ್ಲಿ ಅನಾವರಣ ಮಾಡಲಾಗುತ್ತಿದೆ. ನಿತ್ಯವೂ ಬೇರೆ ಬೇರೆ ಕಥೆಗಳನ್ನು ನೋಡುವುದು ಲೇಸೆಂದು ಅನ್ನಿಸುತ್ತದೆ. ವರ್ಷಾನುಗಟ್ಟಲೆ ಪ್ರಸಾರವಾಗುತ್ತಿರುವ ಧಾರಾವಾಹಿಗಳಿಗಿಂತ ಜಾಗೃತಿ ಮೂಡಿಸುವ ಈ ಕಾರ್ಯಕ್ರಮವನ್ನು ಕೆಲವು ದಿನಗಳಿಂದ ನೋಡುತ್ತಿದ್ದೇನೆ.

—ಅನುರಾಧ ಟಿ., ದಾವಣಗೆರೆ

## ಬೇಬಿ ಯಾರು?

'ಏಕೆ' ಎಂಬ ಪದ 'ಏನಕ್ಕೆ' ಆಗಿ, 'ಬ್ರದರ್' ಎಂಬ ಪದ 'ಬ್ರೊ' ಎಂದು ಬದಲಾಗಿದೆ. ಈಗ 'ಬೇಬಿ' ಎಂಬ ಇನ್ನೊಂದು ಪದ ನಮ್ಮ ಕನ್ನಡ ಧಾರಾವಾಹಿಗಳಲ್ಲಿ ತುಂಬ ಬಳಕೆಯಾಗುತ್ತಿದೆ. ಗರ್ಲ್‌ಫ್ರೆಂಡ್ ತನ್ನ ಬಾಯ್ ಫ್ರೆಂಡಿಗೆ 'ಬೇಬಿ' ಎಂದು ಸಂಬೋಧಿಸುತ್ತಾಳೆ. ಹೆಂಡತಿ, ಗಂಡನಿಗೆ ಬೇಬಿ ಎನ್ನುವುದೂ ಸಾಮಾನ್ಯವಾಗಿದೆ. ಆಶ್ಚರ್ಯದ ಸಂಗತಿ ಎಂದರೆ ಕಲರ್ಸ್ ಕನ್ನಡದ 'ನಿನಗಾಗಿ' ಧಾರಾವಾಹಿಯಲ್ಲಿ ಕೃಷ್ಣಾ ಎಂಬ ಹೆಣ್ಣುಮಗು ತನ್ನ ತಂದೆಗೆ ಬೇಬಿ ಎಂದು ಕರೆಯುತ್ತದೆ.

ಬೇಬಿ ಎಂದರೆ ಇಂಗ್ಲಿಷ್‌ನಲ್ಲಿ ಮಗು ಎಂದು ಅರ್ಥ. ಹಿಂದೆ ತಂದೆ–ತಾಯಿ ತಮ್ಮ ಚಿಕ್ಕ ಮಕ್ಕಳಿಗೆ ಪ್ರೀತಿಯಿಂದ ಬೇಬಿ ಎಂದು ಕರೆಯುತ್ತಿದ್ದರು. ಈಗ ದೊಡ್ಡವರಿಗೆ ಬೇಬಿ ಎಂದು ಕರೆಯುವ ಫ್ಯಾಷನ್ ಶುರುವಾಗಿದೆ. ಸಮವಯಸ್ಕರು ಪರಸ್ಪರ ಬೇಬಿ ಎಂದು ಕರೆದುಕೊಂಡರೆ ಚಿಂತೆ ಇಲ್ಲ. ಮಗುವೊಂದು ತನ್ನ ತಂದೆಗೆ ಬೇಬಿ ಎಂದು ಕರೆದರೆ ಚಂದವೇ?

—ಮುರಲೀಧರ ಕುಲಕರ್ಣಿ, ಬೀದರ್



## ಮಧುರ ಗಾಯನದ ಸಂಭ್ರಮ

ಝೀ ಕನ್ನಡದ 'ಸರಿಗಮಪ' ಕಾರ್ಯಕ್ರಮಕ್ಕೆ ಈ ವಾರ ರಮೇಶ್ ಅರವಿಂದ್ ಆಗಮಿಸಿದ್ದು ವಿಶೇಷವಾಗಿತ್ತು. ಗಾಯಕರು ಮಧುರ ಗೀತೆಗಳನ್ನು ಹಾಡಿ ಸಂಭ್ರಮಿಸಿದ್ದು ಮರೆಯಲಾಗದ ಕ್ಷಣ. ಈ ಸಂದರ್ಭದಲ್ಲಿ ರಮೇಶ್ ಆ ಹಾಡಿನ ಸಂದರ್ಭಗಳನ್ನು ಸ್ಮರಿಸಿಕೊಂಡರು. ರಾಜೇಶ್ ಕೃಷ್ಣನ್ ಸ್ವರ ಮೋಡಿ ಮಾಡಿತು. ಕೆ. ಕಲ್ಯಾಣ್, ನಟಿಯರಾದ ಹೇಮಾ ಪಂಚಮುಖಿ, ಭಾವನಾ ತಮ್ಮ ಅನುಭವಗಳನ್ನು ಹಂಚಿಕೊಂಡರು.

—ಭಾರತೀ ಗಂಗಾಧರ್, ಬೆಂಗಳೂರು

ಝೀ ಕನ್ನಡದ 'ಸರಿಗಮಪ' ಥೀಮ್ ಚಾಲೆಂಜ್ ರೌಂಡ್ ಹೆಸರಿನಲ್ಲಿ ನಡೆದ ಸ್ಪರ್ಧೆಯಲ್ಲಿ ಇಬ್ಬರ ಗಾಯನ ತುಂಬಾ ಚೆನ್ನಾಗಿತ್ತು. ಶಾಸ್ತ್ರೀಯ ಸಂಗೀತ ಮಾದರಿಯಲ್ಲಿ ಬಳ್ಳಾರಿಯ ಪಿ. ಲೀಲಾ ಸೊಗಸಾಗಿ ಹಾಡಿದರು. ಅವರ 'ಬಾ ಬೇಗ ಮನಮೋಹನ' ಹಾಡು ಮನಸ್ಸಿಗೆ ಖುಷಿ ನೀಡಿತು. ಸ್ಪರ್ಧಿಗಳೆಲ್ಲರಿಗೂ ಶಾಸ್ತ್ರೀಯ ಸಂಗೀತ ಆಧಾರಿತ ಹಾಡುಗಳನ್ನೇ ಹಾಡಲು ನೀಡಿದ್ದರೆ ಅವರ ಗಾಯನ ಪ್ರತಿಭೆ ಹೊರತೆಗೆಯಲು ಇನ್ನಷ್ಟು ಸಹಕಾರಿ ಆಗುತ್ತಿತ್ತೇನೋ?

—ಟಿ.ಎಸ್. ಪ್ರತಿಭಾ, ಚಿತ್ರದುರ್ಗ

'ಸರಿಗಮಪ'ದಲ್ಲಿ ಹಳೆಯ ಹಾಡುಗಳನ್ನು ಹೇಳಿಸುವುದು ತುಂಬ ಕಡಿಮೆ. ಕಪ್ಪು ಬಿಳುಪು ಸಿನಿಮಾಗಳಲ್ಲಿ ಅನೇಕ ಸುಮಧುರ, ಕರ್ಣಾನಂದ ನೀಡುವ ಹಾಡುಗಳಿವೆ. 'ಮಹಾಸತಿ ಅನಸೂಯ', 'ಸತ್ಯ ಹರಿಶ್ಚಂದ್ರ', 'ಭೂಕೈಲಾಸ', 'ಗಂಗೆ ಗೌರಿ', 'ಎಮ್ಮೆ ತಮ್ಮಣ್ಣ', 'ನಾಂದಿ', 'ಬೀದಿ ಬಸವಣ್ಣ', 'ಮಕ್ಕಳ ರಾಜ್ಯ' ಹೀಗೆ ಅನೇಕ ಸಿನಿಮಾ ಇವೆ. ಮಕ್ಕಳೇ ಹೇಳಬಹುದಾದ ಅನೇಕ ಹಾಡುಗಳು ಅದರಲ್ಲಿ ಸಿಗುತ್ತವೆ. ಅದನ್ನು ಗ್ರಹಿಸದೆ 'ಚುಟುಚುಟು ಅಂತೈತಿ...' ಇಂತಹ ಹಾಡುಗಳನ್ನು ಹೇಳಿಸುವುದು ಎಷ್ಟು ಸಮಂಜಸ?

ಹಿಂದಿಯ ಸ್ಪರ್ಧೆಯಲ್ಲಿ ಮೂರು– ನಾಲ್ಕು ವರ್ಷದ ಮಕ್ಕಳೆಲ್ಲ ಹಳೆಯ ಹಾಡುಗಳನ್ನು ಚಂದವಾಗಿ ಹಾಡುವುದನ್ನು ಕೇಳಿದ್ದೇನೆ. ಅವಿರ್ಭವ್ ಎಂಬ ಸ್ಪರ್ಧಿ ಹೇಳುವ ಹಾಡುಗಳನ್ನು ಕೇಳುತ್ತಿದ್ದರೆ ನಾವು ಎಲ್ಲೋ ತೇಲಿ ಹೋಗುತ್ತಿದ್ದೇವೆ ಎಂದೆನಿಸುತ್ತದೆ.

ಕನ್ನಡದ 'ಸರಿಗಮಪ'ದಲ್ಲೂ ಈ ರೀತಿಯ ಬದಲಾವಣೆ ತರುವುದು ಸೂಕ್ತ ಆಗಬಹುದು ಎನ್ನುವುದು ನನ್ನ ಸಲಹೆ. ಪ್ರತೀ ಸಂಚಿಕೆಯಲ್ಲಿ ಹಳೆಯ ಸಿನಿಮಾದ ಎರಡು ಹಾಡುಗಳನ್ನಾದರೂ ಹಾಡಿಸಬಹುದು.

— ಎಂ. ವಿಶಾಲಾಕ್ಷಿ, ಬೆಂಗಳೂರು